ಹೆಚ್ಚಾಗಿದ್ದು, ಹೆಚ್ಚಿನ ಅನುದಾನ ಅವಶ್ಯವಿದ್ದು, ಈ ಬಗ್ಗೆ ಪರಿಶೀಲನೆಯಲ್ಲಿದೆ ಆದರೂ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಎಲ್ಲ ಸೂಕ್ತ ಕ್ರಮ ಕೈಗೊಳ್ಳಲಾಗಿದೆ

393 (499) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆಯ ಸವದತ್ತಿ ವಾ ಕ ರಸಾ ಸಂಸ್ಥೆ ಘಟಕದಲ್ಲಿ 7 50 ಲಕ್ಷ ಕಿ ಮೀಗಿಂತ ಹೆಚ್ಚಿಗೆ ಚಲಿಸಿದ ಬಸ್‌ಗಳ ಸಂಖ್ಯೆ ಎಷ್ಟು,

ಆ) 7 50 ಲಕ್ಷ ಕಿ ಮೀ ಗಿಂತ ಹೆಚ್ಚಿಗೆ ಚಲಿಸಿದ ಬಸ್ಸುಗಳ ಬದಲಾಗಿ ಹೊಸ ಬಸ್ಸುಗಳನ್ನು ಪೂರೈಸಲಾಗುವುದೆಂದು ಮಾನ್ಯ ಸಚಿವರನ್ನು ಬೆಳಗಾವಿಯ ವಿಶೇಷ ಅಧಿವೇಶನದ ಸಂದರ್ಭದಲ್ಲಿ ವಿನಂತಿಸಿದ್ದರೂ ಇದುವರೆವಿಗೂ ಹೊಸ ಬಸ್ಸುಗಳನ್ನು ನೀಡದಿರಲು ಕರಣಗಳೇನು,

ಇ) ಯಾವಾಗ ಹೊಸ ಬಸ್ಸುಗಳನ್ನು ನೀಡಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) 39

ಆ) ಈಗಾಗಲೇ 15 ಹೊಸ ಬಸ್ಸುಗಳನ್ನು ಸವದತ್ತಿ ಘಟಕಕ್ಕೆ ಒದಗಿಸಲಾಗಿದೆ

ಇ) ಉಳಿದ ಬಸ್ಸುಗಳನ್ನು ಹಂತಹಂತವಾಗಿ ಒದಗಿಸುವ ಕ್ರಮ ಜರುಗಿಸಲಾಗುವುದು

394 (514) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಬಾದ್): ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಹುಮನಾಬಾದ್‌ನ ಆರ್ ಟಿ ಓ ಕಛೇರಿಯ ವೇ ಬ್ರಿಡ್ಜ್ (ಹಳೆಯ) ಜಾಗವನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಎಷ್ಟು ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ,

ಇ) ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತೆರವು ಮಾಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು

ಆ) 9,018 ಚದರ ಅಡಿಗಳಷ್ಟು

ಇ) ಸದರಿ ಜಾಗದಲ್ಲಿ ಮಾಡಿಕೊಂಡಿರುವ ಒತ್ತುವರಿಯನ್ನು ತೆರವು ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪ ಸಾರಿಗೆ ಆಯುಕ್ತರು, ಗುಲ್ಬರ್ಗಾ ವಿಭಾಗ ಗುಲ್ಬರ್ಗ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,

ಹುಮ್ನಾಬಾದ್ ತನಿಖಾ ರಾಣೆ ಇವರಿಗೆ ಈಗಾಗಲೇ ಸೂಚನೆ ನೀಡಲಾಗಿರುತ್ತದೆ ಸದರಿ ಸ್ಥಳದಲ್ಲಿ ಒತ್ತುವರಿ ತಡೆಗಟ್ಟುವ ಸಂಬಂಧ ರೂ 3 25 ಲಕ್ಷಗಳ ವೆಚ್ಚದಲ್ಲಿ ಆವರಣ ಗೋಡೆ ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

395 (515) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಾಬಾದ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಮನಾಬಾದ್ ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರಿನ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ,

ಆ) ಸದರಿ ಕಾಮಗಾರಿ ಕೆಲಸವನ್ನು ಯಾರು ಹಾಗೂ ಯಾವ ಕಂಪನಿಗೆ ವಹಿಸಲಾಗಿದೆ,

ಇ) ಕಾಮಗಾರಿ ಕೆಲಸವು ನಿಧಾನ ಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು,

ಈ) ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣ ಗೊಳಿಸ ಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಹುಮನಾಬಾದ್–ಚಿಟಗುಪ್ಪ ಪಟ್ಟಣಗಳು ಮತ್ತು ಮಾರ್ಗ ಮಧ್ಯದ 10 ಹಳ್ಳಿಗಳ ಸಂಯುಕ್ತ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ಆಗಸ್ಟ್ 2005ರಲ್ಲಿ ಪ್ರಾರಂಭಿಸಲಾಗಿದೆ

ಆ) ಯೋಜನೆಯ ಕಾಮಗಾರಿಗಳನ್ನು ಕರ್ನಾಟಕ ಜಲ ಮಂಡಳಿಯಿಂದ ಈ ಕೆಳಗಿನಂತೆ ಗುತ್ತಿಗೆದಾರರಿಗೆ ವಹಿಸಿ ಕೊಡಲಾಗಿದೆ

ಪ್ಯಾಕೇಜ್–1

ಮೆ ಲಕ್ಷ್ಮೀ ಸಿವಿಲ್ ಇಂಜಿನೀಯರಿಂಗ್ ಸರ್ವೀಸಸ್ ಪ್ರೈ ಲಿ, ಕೊಲ್ಹಾಪುರ

ಪ್ಯಾಕೇಜ್–2

ಮೆ ದಿ ಇಂಡಿಯನ್ ಹ್ಯೂಮ್ ಪೈಪ್ ಕಂಪನಿ ಲಿ, ಮೀರಜ್

ಇ) ಈ ಯೋಜನೆಯು ಕೆಳಕಂಡ ಕಾರಣಗಳಿಂದ ವಿಳಂಬ ಆಗಿರುತ್ತದೆ

1) ನೆಲಮಟ್ಟದ ಜಲಸಂಗ್ರಹಾಗಾರ ಮತ್ತು ಜಲಶುದ್ಧೀಕರಣ ಘಟಕ ನಿರ್ಮಾಣಕ್ಕೆ ಅವಶ್ಯವಿರುವ ಭೂಮಿಯನ್ನು ಅರಣ್ಯ ಇಲಾಖೆಯಿಂದ ಮಂಡಳಿಗೆ ಹಸ್ತಾಂತರಿಸುವುದು